ದಿ: 05.02.2026

**ಪ್ರಭಾರ ಪ್ರಧಾನ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1321/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸವಿತಾ.ಹೆಚ್ | ಪ್ರಾಸಾ: 3 |
| ತಂದೆಯ/ಗಂಡನ ಹೆಸರು | : | ದ್ಯಾಮೇಶ್ | ಚಾಸಾ: 5 |
| ವಯಸ್ಸು | : | 42 ವರ್ಷ | |
| ಕೆಲಸ | : | ಅಬಕಾರಿ ನಿರೀಕ್ಷಕರು, ದಾವಣಗೆರೆ ಉಪ ವಿಭಾಗ. | ಸಾ ಪ್ರ ಬೋ |
| ವಾಸ | : | ದಾವಣಗೆರೆ. | ದಿ:05.02.2026. |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದ:**

ನಾನು ದಿ.05.02.2024 ರಿಂದ 10.06.2024 ರವರೆಗೆ ಹೊಳಲ್ಕೆರೆ ವಲಯದ ಅಬಕಾರಿ ನಿರೀಕ್ಷಕರಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 11.04.2024 ಸಂಜೆ 04.00 ರ ಸಮಯದಲ್ಲಿ ನಾನು ಶಿವಪುರ ಗ್ರಾಮದಲ್ಲಿ ಗಸ್ತು ಕರ್ತವ್ಯ ಇದ್ದಾಗ, ಆರೋಪಿತರು ಅವರ ಅಡಿಕೆ ಗೋಡೌನ್‌ನಲ್ಲಿ ಅಕ್ರಮವಾಗಿ ಮಧ್ಯವನ್ನು ಇಟ್ಟುಕೊಂಡಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ನಾನು ಸದರಿ ಮಾಹಿತಿಯ ಕುರಿತಾಗಿ ಚಾಸಾ-3 ಮತ್ತು ಚಾಸಾ-4 ರವರಿಗೆ ಮಾಹಿತಿಯನ್ನು ನೀಡಿ, ಸದರಿರವರನ್ನು ಗ್ರಾಮದ ವೃತ್ತದ ಬಳಿ ಕರೆದುಕೊಂಡು ಹೋಗಿರುತ್ತೇನೆ. ಗ್ರಾಮದ ವೃತ್ತದ ಬಳಿ ಇದ್ದ ಚಾಸಾ-1 ಮತ್ತು 2 ರವರಿಗೆ ನಾನು ದಾಳಿ ಮಾಡುವ ಕುರಿತು ಮಾಹಿತಿಯನ್ನು ನೀಡಿ, ನೋಟೀಸ್‌ನ್ನು ನೀಡಿ, ಅವರನ್ನು ಸಹ ಠಾಣಾ ಜೀಪಿನಲ್ಲಿ ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ನಂತರ ಚಾಸಾ-1 ಮತ್ತು 2 ರವರಿಗೆ ಶೋಧನಾ ವಾರೆಂಟ್‌ನ್ನು ತಯಾರಿಸಿಕೊಂಡ ಬಗ್ಗೆ ನೋಟಿಸುಗಳನ್ನು ನೀಡಿ, ಚಾಸಾ-1 ಮತ್ತು 2 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ನಾನು ನಮ್ಮ ಸಿಬ್ಬಂದಿಯನ್ನು ಕಳುಹಿಸಿ ಆರೋಪಿತರನ್ನು ಕರೆದುಕೊಂಡು ಬರುವಂತೆ ಸೂಚಿಸಿದ್ದು, ಆರೋಪಿತರನ್ನು ಕರೆದುಕೊಂಡು ಬಂದಿದ್ದು, ನಂತರ ಗೋಡೌನ್‌ಗೆ ಹಾಕಿದ್ದ ಬೀಗವನ್ನು ತೆಗೆಸಿ ಪರಿಶೀಲನೆ ಮಾಡಿರುತ್ತೇನೆ. ಗೋಡೌನ್‌ನ ಒಳಗೆ ಮರದ ಮಂಚದ ಮೇಲೆ ಎರಡು ರಟ್ಟಿನ ಪೆಟ್ಟಿಗೆಗಳು ಮತ್ತು ಬಿಳಿ ಚೀಲ ಇದ್ದು, ಅದನ್ನು ನಮ್ಮ ಸಿಬ್ಬಂದಿಯವರು ಪರಿಶೀಲಿಸಲಾಗಿ, 90 ಎಂ.ಎಲ್‌ನ 96 ಹೈವರ್ಡ್ ವಿಸ್ಕಿಯ ಟೇಟ್ರಾ ಪ್ಯಾಕೆಟ್‌ಗಳು, 90 ಎಂ.ಎಲ್ ನ 96 ರಾಜಾವಿಸ್ಕಿಯ ಟೇಟ್ರಾ ಪ್ಯಾಕೆಟ್‌ಗಳು, 90 ಎಂ.ಎಲ್.ನ 15 ರಾಜಾವಿಸ್ಕಿ ಟೆಟ್ರಾ ಪ್ಯಾಕೇಟ್‌ಗಳು ಮತ್ತು 90 ಎಂ.ಎಲ್ ನ 15

ಹೈವರ್ಡ್ಸ್ ವಿಸ್ಕಿಯ ಟೇಟ್ರಾ ಪ್ಯಾಕೆಟ್‌ಗಳು ಕಂಡುಬಂದಿದ್ದು, ಒಟ್ಟು 19.980 ಲೀಟರ್ ಮದ್ಯ ಇತ್ತು. ನಂತರ ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡು, ಆತನ ಬಳಿ ಮದ್ಯ ಮಾರಾಟ ಮಾಡಲು ಪರವಾನಿಗೆ ಇದೆಯೇ ಎಂದು ಕೇಳಲಾಗಿ ಇಲ್ಲ ಎಂದು ಹೇಳಿರುತ್ತಾರೆ. ನಂತರ ಅಮಾನತ್ತುಪಡಿಸಿಕೊಂಡ ಎಲ್ಲಾ ಮದ್ಯದ ಪೌಚುಗಳ ಪೈಕಿ ತಲಾ 10 ಪ್ಯಾಕೆಟ್ ಗಳನ್ನು ರಾಸಯನಿಕ ಪರೀಕ್ಷಾ ವರದಿಗಾಗಿ ತೆಗೆದುಕೊಂಡಿರುತ್ತೇವೆ. ನಂತರ ಪಂಚರ ಸಮಕ್ಷಮ ಸಂಜೆ 04.15 ರಿಂದ 05.15 ಗಂಟೆಯವರೆಗೆ ಮಹಜರಿನ ಕ್ರಮವನ್ನು ಜರುಗಿಸಿ, ಮದ್ಯದ ಪೌಚುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಸಾಕ್ಷಿ ನೋಟಿಸಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, 1(ಬಿ) ಮತ್ತು 7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಶೋಧನಾ ವಾರೆಂಟಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, 2(ಸಿ) ಎಂದು, ಪಂಚನಾಮೆಯಲ್ಲಿನ ಸಹಿಯನ್ನು ನಿಪಿ-3(ಸಿ) ಎಂದು, ಮಾಲು ಪಟ್ಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು, ಮಾದರಿ ಮೊಹರಿನಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-2 ರಲ್ಲಿ ಆರೋಪಿತನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ-2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುದ್ದೆ ಮಾಲು-1 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮುದ್ದೆ ಮಾಲು-1(ಸಿ) ಎಂದು ಗುರುತಿಸಲಾಯಿತು. ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 41 ರಡಿಯಲ್ಲಿ ನೋಟೀಸನ್ನು ನೀಡಿ ಬಿಟ್ಟಿರುತ್ತೇನೆ. ಅಮಾನತ್ತುಪಡಿಸಿಕೊಂಡ ಮದ್ಯದ ಮಾಲಿನೊಂದಿಗೆ ಠಾಣೆಗೆ ಬಂದು ಸ್ವದೂರನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ. ಸಾಕ್ಷಿ ಸ್ವದೂರನ್ನು ನೋಡಿ ಗುರುತಿಸಿದ್ದು, ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಮತ್ತು ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿತರ ಪರ ಶ್ರೀ.ಯು.ಎಸ್ ವಕೀಲರಿಂದ**

3. ಸದರಿ ದಿನದಂದು ಚುನಾವಣೆ ಇದ್ದ ಕಾರಣ ಹೊಳಲ್ಕೆರೆಯಿಂದ ಪ್ರಾಂರಂಭಗೊಂಡು ಶಿವಪುರದ ಕಡೆಗೆ ಗಸ್ತು ಕರ್ತವ್ಯ ಮಾಡಿರುತ್ತೇನೆ. ಯಾವ ಯಾವ ಗ್ರಾಮಗಳಲ್ಲಿ ಗಸ್ತು ಕರ್ತವ್ಯ ಮಾಡಿರುತ್ತೇವೆ ಎಂದು ನೆನಪಿಲ್ಲ. ಸದರಿ ದಿನದಂದು ಗಸ್ತು ಕರ್ತವ್ಯವನ್ನು ಸಂಜೆ ಸಮಯದಲ್ಲಿ ಪ್ರಾರಂಭಿಸಿರುತ್ತೇವೆ. ನಮ್ಮ ಕಚೇರಿಯನ್ನು ಮಧ್ಯಾಹ್ನ 03.00 ಗಂಟೆಗೆ ಬಿಟ್ಟಿರುತ್ತೇವೆ. ನಾವು ಯಾವ ಮಾರ್ಗದಲ್ಲಿ ಹೋಗಿರುತ್ತೇವೆ ಎಂದು ಈಗ ನೆನಪಿಲ್ಲ. ಠಾಣಾ ಜೀಪಿನಲ್ಲಿ ನಾನು ಮತ್ತು ನಮ್ಮ ಸಿಬ್ಬಂದಿಗಳಾದ ಚಾಸಾ-3 ಮತ್ತು 4 ರವರು ಹೋಗಿದ್ದೇವು. ನಮ್ಮ ಠಾಣೆಗೆ ಪುನಃ ಸಂಜೆ 06 ಗಂಟೆಗೆ ಬಂದಿರುತ್ತೇವೆ. ಠಾಣೆಗೆ ನಾನು ಮತ್ತು ನಮ್ಮ ಸಿಬ್ಬಂದಿ ಮಾತ್ರ ಬಂದಿರುತ್ತೇವೆ. ಆರೋಪಿಗೆ ಸ್ಥಳದಲ್ಲಿಯೇ ನೋಟಿಸ್ ನೀಡಿ ಬಿಟ್ಟಿರುತ್ತೇವೆ. ಪಂಚರಿಗೆ ನಾನೇ ಕರೆದು ನೋಟೀಸನ್ನು ನೀಡಿರುತ್ತೇನೆ. ಪಂಚನಾಮೆಯನ್ನು

ದಿ: 05.02.2026

ನಮ್ಮ ಸಿಬ್ಬಂದಿಯಾದ ಚಾಸಾ-3 ರವರು ಬರೆದಿರುತ್ತಾರೆ. ಮಹಜರಿನಲ್ಲಿ ಅಮಾನತ್ತು ಪಡಿಸಿಕೊಂಡ ಮಧ್ಯದ ಪೌಚುಗಳು ಉತ್ಪಾದನಾ ದಿನಾಂಕ, ಘಟಕ, ಸ್ಥಳ ಮತ್ತು ಬ್ಯಾಚ್ ಸಂಖ್ಯೆ ಕುರಿತು ಉಲ್ಲೇಖ ಮಾಡಿಲ್ಲ. ಗೋಡೌನ್‌ನಿನ ಬಾಗಿಲು ದಕ್ಷಿಣ ದಿಕ್ಕಿಗೆ ಇದೆ. ಗೋಡೌನ್ ವಿಸ್ತೀರ್ಣ ಗೊತ್ತಿಲ್ಲ. ಗೋಡೌನ್‌ನ ಚೆಕ್ಕುಬಂದಿ ಪೂರ್ವಕ್ಕೆ ಗೋಡೌನ್‌ಗೆ ಹೊಂದಿಕೊಂಡ ಖಾಲಿ ಜಾಗ, ಪಶ್ಚಿಮಕ್ಕೆ ಗ್ರಾಮಕ್ಕೆ ಹೊಂದಿಕೊಂಡ ಖಾಲಿ ಜಾಗ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಎ.ಕೆ.ಕಾಲೋನಿ ಇದೆ. ಚೆಕ್ಕುಬಂದಿಯನ್ನು ಅಲ್ಲಿ ಇದ್ದಂತಹ ಸ್ಥಳೀಯರು ಹೇಳಿದ್ದು, ಅವರು ಹೆಸರನ್ನು ಹೇಳಿಲ್ಲ. ಈ ಮೇಲ್ಕಂಡ ಚೆಕ್ಕುಬಂದಿಗೆ ಒಳಪಟ್ಟ ಯಾವುದೇ ಗೋಡೌನ್ ಇಲ್ಲ ಎಂದರೆ ಸರಿಯಲ್ಲ. ನಾನು ಶಿವಪುರ ಗ್ರಾಮಕ್ಕೆ ಬೇಟಿ ನೀಡಿಲ್ಲ ಮತ್ತು ಯಾವುದೇ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮುದ್ದೆ ಮಾಲು-1 ಖಾಲಿ ಪೌಚುಗಳು ಎಲ್ಲಾ ಕಡೆ ಸಿಗುತ್ತವೆ ಎಂದರ ಸಾಕ್ಷಿ ಸಿಗಬಹುದು ಎಂದು ಹೇಳುತ್ತಾರೆ. ಚುನಾವಣಾ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇವೆ ಎಂದು ತೋರಿಸಲು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ. ಹೇ. ಕೇ. ಸರಿಯಿದೆ.

ಸಿ/ಸಿ ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ